ಸಿನಿಬಿಟ್ಸ್

■ ವಿಶಾಖ ಎನ್.

# ಸಂಕ್ರಾಂತಿಗೆ ಗುಂಟೂರು ಖಾರಂ



'ಗುಂಟೂರು ಖಾರಂ' ತೆಲುಗು ಸಿನಿಮಾದ ಪೋಸ್ಟರ್ ದಸರಾ ಸಂದರ್ಭದಲ್ಲಿ ಅನಾವರಣಗೊಂಡಿತು. ತ್ರಿವಿಕ್ರಮ ಹಾಗೂ ಮಹೇಶ್ ಬಾಬು ಹದಿಮೂರು ವರ್ಷಗಳ ನಂತರ ಮತ್ತೆ ಒಟ್ಟಾಗಿ ಕೈಗೆತ್ತಿಕೊಂಡಿರುವ ಪ್ರಾಜೆಕ್ಟ್ ಇದು. 2010ರಲ್ಲಿ 'ಖಲೇಜಾ' ತೆಲುಗು ಚಿತ್ರವನ್ನು ತ್ರಿವಿಕ್ರಮ ನಿರ್ದೇಶಿಸಿದ್ದರು. ಅದು ಸೂಪರ್‌ಹಿಟ್ ಆಗಿತ್ತು. ಕುಟುಂಬ ಕಥನವನ್ನು ಇಟ್ಟೂ, ನಾಯಕನ ಒಡ್ಡೋಲಗ ಮೆರೆಸುವಂತಹ ವಿಷಯದ ಚಿತ್ರಕಥೆ ಬರೆಯುವುದಕ್ಕೆ ತ್ರಿವಿಕ್ರಮ ಹೆಸರುವಾಸಿ. 'ಗುಂಟೂರು ಖಾರಂ'ನಲ್ಲಿಯೂ ಅದು ಮುಂದುವರಿಯಲಿದೆ ಎಂಬ ನಿರೀಕ್ಷೆ ಇದೆ.

ಸಂಕ್ರಾಂತಿ ಹೊತ್ತಿಗೆ ಈ ಚಿತ್ರವು ತೆರೆಕಾಣಲಿದೆ. ಜಯರಾಂ, ಶ್ರೀಲೀಲಾ, ಜಗಪತಿ ಬಾಬು, ಮೀನಾಕ್ಷಿ ಚೌಧರಿ, ರಮ್ಯಾ ಕೃಷ್ಣ ಚಿತ್ರದ ತಾರಾಗಣದಲ್ಲಿದ್ದಾರೆ. ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್ ಹಿಂಭಾಗದಲ್ಲಿ ಮಹೇಶ್ ಬಾಬು ಕುಳಿತುಕೊಂಡು, ಸಿಗರೇಟು ಹಚ್ಚಿಕೊಳ್ಳುವ ದೃಶ್ಯದ ಪೋಸ್ಟರ್ ಚಿತ್ರದ ಕಥಾವಸ್ತು ಏನಿರಬಹುದು ಎಂಬ ಸಣ್ಣ ಸುಳಿವನ್ನೂ ಕೊಡುವುದಿಲ್ಲ. ಸಾಹಸ ಪ್ರಧಾನ ಕಥನದ ಸಿನಿಮಾ ಇದು ಎಂದಷ್ಟೇ ನಿರ್ದೇಶಕರು ಹೇಳಿದ್ದಾರೆ. ಬಹುತೇಕ ಪೋಸ್ಟರ್‌ಗಳಲ್ಲಿ ಮಹೇಶ್ ಬಾಬು ಸಿಗರೇಟು ಸೇದುವ ಚಿತ್ರಗಳೇ ಇವೆ.

ಮೊದಲು ಈ ಸಿನಿಮಾಗೆ ಪೂಜಾ ಹೆಗಡೆ ನಾಯಕಿಯಾಗಲಿದ್ದಾರೆ ಎನ್ನುವ ಸುದ್ದಿ ಇತ್ತು. ಆಮೇಲೆ ಅವರ ಜಾಗಕ್ಕೆ ಶ್ರೀಲೀಲಾ ಬಂದರು. ಮನೋಜ್ ಪರಮಹಂಸ ಛಾಯಾಚಿತ್ರಗ್ರಹಣ ಇರುವುದರಿಂದ ಸಿನಿಮಾದ ದೃಶ್ಯವಂತಿಕೆಯ ಬಗೆಗೆ ನಿರೀಕ್ಷೆ ಮಡುಗಟ್ಟಿದೆ. ತಮನ್ ಎಸ್. ಸಂಗೀತ ಸಂಯೋಜನೆ ಮಾಡಿದ್ದಾರೆ.

ಈ ಸಿನಿಮಾ ನಂತರ ರಾಜಮೌಳಿ ನಿರ್ದೇಶನದ ಚಿತ್ರದಲ್ಲಿ ಮಹೇಶ್ ಬಾಬು ಅಭಿನಯಿಸಲಿದ್ದಾರೆ ಎಂಬ ಮಾತಿದೆ. ■

# 'ಟ್ರೆಂಡ್ ಕಂಟೆಂಟ್ ಎನ್ನುವುದೇ ಮಿಥ್ಯೆ

ನಟ ಅಕ್ಷಯ್ ಕುಮಾರ್ ಉಳಿದ ತಾರಾನಟರಿಗಿಂತ ಪ್ರತಿವರ್ಷವೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸುವವರ ಪೈಕಿ. ಈ ವರ್ಷ ಅವರ ಅಭಿನಯದ ಚಿತ್ರಗಳು ಬಾಕ್ಸ್‌ಆಫೀಸ್‌ನಲ್ಲಿ ದೊಡ್ಡ ಸದ್ದನ್ನೇನೂ ಮಾಡಿಲ್ಲ. ಆದರೆ, ಚಾಲ್ತಿಯಲ್ಲಿ ಇರುವ ಅವರ ಜಾಯಮಾನ ಈಗಲೂ ಹಾಗೆಯೇ ಇದೆ. ಯಾರನ್ನೂ ವೈಯಕ್ತಿಕವಾಗಿ ಟೀಕಿಸದ ಅಕ್ಷಯ್ ಕುಮಾರ್, ಶಿಸ್ತಿಗೆ ಹೆಸರುವಾಸಿ. ಚಿತ್ರೀಕರಣದ ಸ್ಥಳಕ್ಕೆ ಬರುವ, ವ್ಯಾಯಾಮ ಮಾಡುವ ಸಮಯದ ವಿಷಯದಲ್ಲಿ ಅವರ ಬದ್ಧತೆಯನ್ನು ಅನೇಕರು ಕೊಂಡಾಡಿದ್ದಾರೆ. ಸಾಮಾಜಿಕ ಮಾಧ್ಯಮಗಳು ಚಿಕ್ಕಮಕ್ಕಳು, ಯುವಜನತೆಯ ಮೇಲೆ ಬೀರುತ್ತಿರುವ ಪರಿಣಾಮದ ಬಗೆಗೆ ಈಗ ಅವರು ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಸಾಮಾಜಿಕ ಮಾಧ್ಯಮಗಳು ಯಾರು ಯಾರನ್ನೋ ದಿಢೀರನೆ ಟ್ರೆಂಡ್ ಮಾಡಿಬಿಡುತ್ತವೆ. ಅದಕ್ಕಾಗಿ ಅವರು ಕಂಟೆಂಟ್ ಬರೆಯುತ್ತಾರೆ. ನಟಿಸುವುದೋ, ಮತ್ತಿನ್ಯಾವುದೋ ಕಲೆ ಪ್ರದರ್ಶಿಸುವುದನ್ನೋ ಮಾಡುತ್ತಾರೆ. ಇಂತಹ ಕಂಟೆಂಟ್‌ನಲ್ಲಿ ಎಷ್ಟೋ ಯುವಕರಿಗೆ ತಾವು ಆಡುತ್ತಿರುವ ಮಾತಿನ ಸತ್ಯಾಸತ್ಯತೆಯೇ ಗೊತ್ತಿರುವುದಿಲ್ಲ. ನಿರ್ದಿಷ್ಟ ಸಂಗತಿಯೊಂದರ ಅಸಲಿಯತ್ತು ಏನು ಎಂದು ತಿಳಿಯುವ ಗೊಡವೆಯೂ ಅವರಿಗೆ ಇಲ್ಲ. ಟ್ರೆಂಡ್ ಆಗಿದೆ ಎಂದಮಾತ್ರಕ್ಕೆ ತಮ್ಮ ಕಂಟೆಂಟ್ ಅತ್ಯುತ್ತಮ ಎಂಬ ಭ್ರಮೆ ಅಂಥವರಿಗೆ ಉಂಟಾಗುತ್ತದೆ. ಅದಕ್ಕೂ ಮಿಗಿಲಾಗಿ ತಿಂಗಳಿಗೆ ಆರೆಂಟು ಲಕ್ಷ ರೂಪಾಯಿವರೆಗೆ ಗಳಿಸಲಾರಂಭಿಸಿದ್ದಾರೆ. ಇದು ಒಂದು ರೀತಿಯಲ್ಲಿ ಮದವನ್ನು ತುಂಬುತ್ತಿದೆ. ನಿಜಕ್ಕೂ ಬಹುಸಂಖ್ಯಾತರಿಗೆ ಸುಳ್ಳು ಮಾಹಿತಿ ಅಥವಾ ಪೊಳ್ಳು ಮನರಂಜನೆ ಬೇಕಾಗಿರುವುದಿಲ್ಲ. ಯಾವ್ಯಾವುದೋ ಕಾರಣದಿಂದಾಗಿ, ತಾಂತ್ರಿಕ ಅನುಕೂಲದಿಂದಾಗಿ ಕಂಟೆಂಟ್ ಟ್ರೆಂಡ್ ಆಗಿಬಿಡುತ್ತದೆ. ಜನರು ಗಂಭೀರವಾಗಿ ಆಲೋಚನೆ ಮಾಡುವ ವಿಷಯಗಳು ವಾಸ್ತವದಲ್ಲಿ ಬೇರೆಯದೇ ಆಗಿರುತ್ತವೆ. ಅಂತಹುದೊಂದು ಜಗತ್ತಿನಲ್ಲಿ ತಾವು ಇದ್ದೇವೆ ಎಂಬ ವಾಸ್ತವ ಟ್ರೆಂಡ್ ಸೆಟರ್‌ಗಳಿಗೆ ಗೊತ್ತಿರಬೇಕು' ಎಂದು ಅಕ್ಷಯ್ ಕಿವಿಮಾತು ಹೇಳಿದರು. ಅವರು ಮಾಧ್ಯಮವೊಂದಕ್ಕೆ ಸಂದರ್ಶನ ನೀಡುವಾಗ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದರು. ಅದನ್ನು ಕೆಲವು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಕೂಡ ಅನುಮೋದಿಸಿದರು.

ಟಿನು ಸುರೇಶ್ ದೇಸಾಯ್ ನಿರ್ದೇಶನದ 'ಮಿಷನ್ ರಾಣಿಗಂಜ್' ಚಿತ್ರವು ಈ ವರ್ಷ ಅಕ್ಟೋಬರ್‌ನಲ್ಲಿ ತೆರೆಕಂಡಿತು. ಕಡಿಮೆ ಬಜೆಟ್‌ನಲ್ಲಿ ತಯಾರಾಗಿರುವ, ಅಕ್ಷಯ್ ಕುಮಾರ್ ಅಭಿನಯದ ಈ ಸಿನಿಮಾ ಕೂಡ ಬಾಕ್ಸ್‌ಆಫೀಸ್‌ನಲ್ಲಿ ಯಶಸ್ಸು ಕಾಣಲಿಲ್ಲ. ■

